ದಿನಾಂಕಃ 19.03.2015 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಶ್ರೀ ಬಿಆರ್‌ಪಿ ವಕೀಲರಿಂದ

ಅನುಸೂಚಿ ಸ್ವತ್ತುಗಳು ಪಿತ್ರಾರ್ಜಿತ ಆಸ್ತಿಗಳು. ಸಿದ್ದಮ್ಮ ನನ್ನ ಅತ್ತೆ. (ನನ್ನ ಗಂಡನ ತಾಯಿ). ನನ್ನ ಅತ್ತೆ ನಮ್ಮ ಬಳಿ ಇದ್ದರೂ ಅವರನ್ನು ನಾನೇ ನೋಡಿಕೊಳ್ಳುತ್ತಿದ್ದೆ. ಸಿದ್ದಮ್ಮ ಬದುಕಿದ್ದಾಗ ವಿಲ್ ಬರೆದಿದ್ದರೋ ಇಲ್ಲವೋ ಗೊತ್ತಿರಲಿಲ್ಲ ಅವರು ತೀರಿಕೊಂಡ ನಂತರ ಗೊತ್ತಾಯಿತು.

ಸದರಿ ವಿಲ್‌ನ ಪ್ರಕಾರ ಸಿದ್ದಮ್ಮ ಆಸ್ತಿಗಳನ್ನು 7ನೇ ಎದುರುದಾರರಿಗೆ ಕೊಟ್ಟಿದ್ದಾರೆ. ವಿಲ್‌ನ ಮೂಲಕ ಆಸ್ತಿಗಳನ್ನು ವಿಲೇವಾರಿ ಮಾಡಲು ಸಿದ್ದಮ್ಮನಿಗೆ ಹಕ್ಕು ಇರಲಿಲ್ಲ. ಸದರಿ ವಿಲ್‌ಗೆ ಸಂಬಂದಪಟ್ಟ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಸಿದ್ದಮ್ಮನ ಹೆಸರಲ್ಲಿದ್ದ ಆಸ್ತಿಗಳು ಕುಟುಂಬದ ಸದಸ್ಯರಿಗೆ ಹಂಚಿಕೆ ಆಗಬೇಕು ಎನ್ನುವುದು ನಿಜ.

*(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದಂತೆ 19.03.2015 ರಂದು ಬೆರಳಚ್ಚು ಮಾಡಲಾಯಿತು)*
*ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.*

*ಹಿರಿಯ ಸಿವಿಲ್ ನ್ಯಾಯಾಧೀಶರು-ಎಎಂಎಸಿಟಿ,*
*ಭದ್ರಾವತಿ.*